
# ಎಸ್.ಆರ್.ರಾಮಸ್ವಾಮಿಯವರ 'ಅಗ್ನಿಪಥಿಕೆ ನಿವೇದಿತಾ'

**ಸೋ**ದರಿ ನಿವೇದಿತಾ ಬಗ್ಗೆ ಈಚೆಗೆ ಬಂದ ಸಾಹಿತ್ಯದಲ್ಲಿ ಶ್ರೀ ಎಸ್.ಆರ್. ರಾಮಸ್ವಾಮಿಯವರು ಬರೆದ ಈ ಕೃತಿ ಗಂಭೀರವಾಗಿದ್ದು , ಉತ್ತಮ ಕೊಡುಗೆ ಯಾಗಿದೆ. ''ಭಾರತದ ಸ್ವಾತಂತ್ರ್ಯ ಸಂಘರ್ಷದ ಮುನ್ನಡೆಗಾಗಿಯೂ ವಿವಿಧ ಮುಖ ಸಾಂಸ್ಕೃತಿಕ ಉಜ್ಜೀವನಕ್ಕಾಗಿಯೂ ಸೋದರಿ ನಿವೇದಿತಾರಿಂದ ಸಂದ ಕೊಡುಗೆಯ ಸ್ಮರಣೆ ಚಿರಕಾಲ ಸ್ಫೂರ್ತಿಸ್ಥಾನವಾಗಿ ಉಳಿಯುತ್ತದೆ... ಇಲ್ಲಿರುವುದು ಆಕೆಯ ಭಾರತದಲ್ಲಿನ ಜೀವನ ಪಯಣದ ಹಲವು ಘಟನೆಗಳನ್ನು ಆಧರಿಸಿದ ವ್ಯಕ್ತಿತ್ವ ಚಿತ್ರಣ'' ಎನ್ನುವ ಪ್ರಕಾಶಕರ ಮಾತು ಗಮನಾರ್ಹ.




**ಕೃತಿ:** ಅಗ್ನಿಪಥಿಕೆ ನಿವೇದಿತಾ
**ಲೇಖಕರು :** ಎಸ್.ಆರ್. ರಾಮಸ್ವಾಮಿ
**ಪ್ರಕಾಶನ :** ರಾಷ್ಟ್ರೋತ್ಥಾನ ಸಾಹಿತ್ಯ , ಬೆಂಗಳೂರು-೫೬೦ ೦೧೯
**ಪುಟ:** 124 **ಬೆಲೆ :** 100

ಸ್ವಾತಂತ್ರ್ಯ ಚಳುವಳಿ ಭಾರತೀಯರ ಮನಸ್ಸಿನಲ್ಲಿ ಮೊಳಕೆ ಒಡೆಯುತ್ತಿದ್ದ ಕಾಲದಲ್ಲಿ ನಿವೇದಿತಾ ಬದುಕು ಮತ್ತು ಕಾರ್ಯಗಳು ಐತಿಹಾಸಿಕವಾಗಿ ವೇಗವರ್ಧಕವಾಗಿ ಕೆಲಸ ಮಾಡಿದ್ದು ಹೇಗೆ ಎಂಬುದನ್ನು ಪುಸ್ತಕದ ಮೊದಲ ಭಾಗ 'ನಿವೇದಿತಾ ಜೀವಿತಕಾರ್ಯದ ಸಾಂದರ್ಭಿಕತೆ' ಓದುಗರ ಎದುರು ತೆರೆದಿಡುತ್ತದೆ. ೧೮೫೭ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಫಲವಾಗಿ ಭಾರತೀಯ ಸಮಾಜದಲ್ಲಿ ಕ್ರಮೇಣ ಅಮೂಲ್ಯವಾದ ಸ್ವಾತಂತ್ರ್ಯದ ಬಗ್ಗೆ ಜಾಗೃತಿ ಮೂಡುತ್ತಿತ್ತು. ಸ್ವಾಭಿಮಾನ ಮತ್ತು ಕ್ಷಾತ್ರಪ್ರವೃತ್ತಿಯ ಪುನರುಜ್ಜೀವನದ ಅಗತ್ಯವಿತ್ತು. ಸ್ವದೇಶೀಯತೆ ಕ್ರಿಯಾಶೀಲವಾಗಲು ಎಲ್ಲ ಜೀವನಕ್ಷೇತ್ರಗಳಲ್ಲೂ ಉಜ್ಜೀವನ ಅನಿವಾರ್ಯವಾಗಿತ್ತು. ನಿವೇದಿತಾ ಇವೆಲ್ಲದರಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಾಧನೆ ಮಾಡಿದುದಲ್ಲದೆ ಈ ಕಾರ್ಯಕ್ಕೆ ತಕ್ಕುದಾದ ಆಕ್ರಮಕ ಹಿಂದೂಧರ್ಮ ಎಂಬ ದರ್ಶನವನ್ನೇ ಆವಿಷ್ಕರಿಸಿ, ತಾತ್ತ್ವಿಕ ಹಿನ್ನೆಲೆಯನ್ನು ನೀಡಿದರು. ಸ್ವಾಮಿ ವಿವೇಕಾನಂದರು ತನ್ನ ಆದ್ಯ ಕರ್ತವ್ಯವು ವೇದಾಂತ ಪ್ರಚಾರ ಅಥವಾ ಶ್ರೀರಾಮಕೃಷ್ಣರ ಸಂದೇಶವನ್ನು ಹರಡುವುದು ಅಲ್ಲ, ನನ್ನ ಜನತೆಯಲ್ಲಿ ಪೌರುಷವನ್ನು ತುಂಬುವುದು ಎಂದು ಭಾವಿಸಿದ್ದರು. ಭಾರತದೊಂದಿಗೆ ಸಮೀಕರಿಸಿಕೊಂಡಿದ್ದ ನಿವೇದಿತಾ ಈ ಕೆಲಸವನ್ನು ಸಾರ್ಥಕವಾಗಿ ಮುಂದುವರಿಸಿದರು.

ವಿದೇಶೀ ಸಾಂಸ್ಕೃತಿಕ ಆಕ್ರಮಣವನ್ನು ವಿರೋಧಿಸುತ್ತಿದ್ದ, ಬ್ರಹ್ಮಸಮಾಜದಂತಹ ವಿವಿಧ ಸಂಘ ಸಂಸ್ಥೆಗಳ ಅನುಯಾಯಿಗಳಿಗೂ ಬಹುಮುಖೀ ಸನಾತನ ಧರ್ಮವನ್ನು ಅನುಸರಿಸುವ ಶ್ರೀರಾಮಕೃಷ್ಣ ವಿವೇಕಾನಂದ ವಿಚಾರಧಾರೆಗೂ ಹೊಂದಾಣಿಕೆ ತರುವಲ್ಲಿಯೂ ನಿವೇದಿತಾ ಪ್ರಯತ್ನಿಸಿದರು. ನೈಜ ವೇದಾಂತಕ್ಕೂ ರಾಷ್ಟ್ರೀಯತೆಗೂ ಇದ್ದ ಬಿರುಕನ್ನು ತೊಡೆದುಹಾಕಿ, ಎರಡನ್ನೂ ಸಮನ್ವಯಗೊಳಿಸಿದರು. ಭಾರತೀಯರಿಗೇ ತಮ್ಮ ಭವ್ಯ ವಾರಸಿಕೆಯನ್ನು ನೆನಪಿಸಿ, ಶ್ರದ್ಧಾಬಿಂದುಗಳನ್ನು ಬಳಸಿ, ಹಿಂದೂ ಸಮಾಜವನ್ನು ಸಂಘಟಿಸಿದರು. ರಾಜಕೀಯವಷ್ಟೇ ಅಲ್ಲ, ವಿಜ್ಞಾನ, ಶಿಕ್ಷಣ, ಪರಂಪರೆಯ ಅಧ್ಯಯನ, ಕಲೆ-ಸಾಹಿತ್ಯಾದಿ ಕ್ಷೇತ್ರಗಳಲ್ಲಿಯೂ ಸ್ವದೇಶೀಕರಣದ ಅಗತ್ಯವನ್ನು ಮನಗಾಣಿಸಿ, ಹೆಚ್ಚುಹೆಚ್ಚು ಜನರನ್ನು ಪ್ರೇರಿಸಿ, ಕಾರ್ಯೋನ್ಮುಖರಾಗಲು ಅಣಿಗೊಳಿಸಿ, ಅವರಲ್ಲಿ ಮಾನಸಿಕ ಪ್ರಬುದ್ಧತೆಯನ್ನು ಮೂಡಿಸಿದರು. ಸ್ವತಃ ಪಾರಂಪರಿಕ ಪುರಾಣೇತ್ಯಾದಿ ಸಾಹಿತ್ಯವನ್ನು ಹೊಸ ದೃಷ್ಟಿಯಿಂದ ಕಂಡುದಲ್ಲದೆ, ಇಲ್ಲಿನ ಶಿಕ್ಷಣ ವ್ಯವಸ್ಥೆ, ದರ್ಶನಗಳನ್ನು ಪ್ರಚಲಿತಗೊಳಿಸಿ ಈ ಎಲ್ಲ ಕಾರ್ಯಕ್ಕೂ ದೃಢವಾದ ನೆಲೆಗಟ್ಟನ್ನು ಒದಗಿಸಿದರು. ರಾಷ್ಟ್ರೀಯತೆಯು ಧರ್ಮದ ಅಭಿನ್ನ ಅಂಗವೇ ಎಂದು ಸ್ವಾಮೀಜಿ ಬೀಜರೂಪದಲ್ಲಿ ಪ್ರತಿಪಾದಿಸಿದ್ದನ್ನು ಅರವಿಂದರು ಆವಿಷ್ಕರಿಸತೊಡಗಿದ್ದನ್ನು ದೃಢಗೊಳಿಸಿದವರು ನಿವೇದಿತಾ.

ಎರಡನೆಯ ಭಾಗವಾದ ನಿವೇದಿತಾ ಜೀವನಪಯಣ ಸಮೀಕ್ಷೆಯಲ್ಲಿ ಹತ್ತು ಅಧ್ಯಾಯಗಳಿವೆ. ನಿವೇದಿತಾ ಗುರುಸನ್ನಿಧಿಯ ಬಳಿ ಸಾರಿದುದು; ಇಂಗ್ಲೆಂಡಿನಿಂದ ಕರ್ಮಭೂಮಿ ಭಾರತಕ್ಕೆ ಬಂದುದು; ಅರವಿಂದರೊಡಗೂಡಿ ಸನಾತನ ಧರ್ಮವೆಂದರೆ ತತ್ತ್ವಶಃ

ರಾಷ್ಟ್ರೀಯತೆಯೇ ಎಂಬ ಹೊಸ ವ್ಯಾಖ್ಯಾನ ನೀಡಿದುದು; ಸಮಾಜೋತ್ಥಾನ ಅಭಿಯಾನ ಸರಣಿ; ಸ್ವಾಮೀಜಿ ನಿರ್ಯಾಣಕ್ಕೆ ಮುನ್ನಿನ ಉದ್ಬೋಧನ ಪರ್ವ – ಈ ಐದು ಅಧ್ಯಾಯಗಳದು ಒಂದು ಘಟ್ಟ. ಮುಂದಿನ ಐದು ಅಧ್ಯಾಯಗಳಲ್ಲಿ ನಿವೇದಿತಾ ಸ್ವತಂತ್ರವಾಗಿ ನಡೆಸಿದ ಕಾರ್ಯಗಳ ವಿವರಗಳಿವೆ. ಸ್ವಾಮೀಜಿಯ ನಿರ್ಯಾಣಾನಂತರದ ದಿನಗಳಲ್ಲಿ ಅಧ್ಯಾತ್ಮ ಪ್ರಸಾರ ಮತ್ತು ಸೇವೆಗಳಷ್ಟಕ್ಕೆ ಸೀಮಿತಗೊಂಡ ರಾಮಕೃಷ್ಣ ಮಠದಿಂದ ಬೇರೆಯಾಗಿ, ನಿವೇದಿತಾ ನಡೆಸಿದ ಸಮಾಜೋಜ್ಜೀವನದ ಮಹಾಭಿಯಾನ; ವೈಸ್‌ರಾಯ್ ಕರ್ಜನನ ಮುಖಭಂಗ ಹಾಗೂ ವಂಗಭಂಗವನ್ನಾತ ಹಿಂದೆ ತೆಗೆದುಕೊಳ್ಳಬೇಕಾದ ಸಂದರ್ಭ ನಿರ್ಮಿಸಿದ ಸ್ವದೇಶೀ ಆಂದೋಲನದ ಸುವರ್ಣ ಪರ್ವ; ತೀವ್ರಗಾಮಿಗಳು–ಮಂದಗಾಮಿಗಳ ಭಿನ್ನತೆ ಹೋರಾಟವನ್ನು ದುರ್ಬಲಗೊಳಿಸೀತೆಂಬ ನಿವೇದಿತಾ ಯೋಚನೆ, ರಾಷ್ಟ್ರೀಯತೆಯೆಂದರೆ ಧರ್ಮವೇ ಎಂಬ ಅರವಿಂದರ ವಿಚಾರದ ಸ್ಫುಟೀಕರಣ ಹಾಗೂ ಪಾಂಡಿಚೆರಿಗೆ ಹೋಗಲು ಅವರಿಗೆ ಸಲಹೆ, ಸ್ವತಃ ತಾವೇ ಯುರೋಪಿಗೆ ಒಂದು ವರ್ಷದ ಮಟ್ಟಿಗೆ ಹೋದುದು ಈ ಸಂದರ್ಭಗಳನ್ನೊಳಗೊಂಡ ಝುಂಝಾವಾತದ ನಟ್ಟ ನಡುವೆ; ನಿವೇದಿತಾ ಕೊನೆಯ ದಿನಗಳ ಕೆಳಗಿಳಿದ ಜವನಿಕೆ ಈ ನಾಲ್ಕು ಅಧ್ಯಾಯಗಳಲ್ಲಿ ನಿವೇದಿತಾ ನಡೆಸಿದ ಮಹಾನ್ ಕಾರ್ಯಗಳ ಸಂಕ್ಷಿಪ್ತ ವಿವರಣೆ ಇದೆ. ಹತ್ತನೆಯ ಕೊನೆಯ ಅಧ್ಯಾಯದಲ್ಲಿ ನಿವೇದಿತಾ ಹೇಗೆ ಭಾರತಪ್ರೇಮದ ಸಾಕಾರರೂಪ ಆಗಿದ್ದರೆಂಬ, ಭಾರತದ ಚರಿತ್ರೆಯಲ್ಲಿ ಅವರ ಸ್ಥಾನ ಏನೆಂಬುದರ ಸಂಕ್ಷಿಪ್ತ ವಿವರಣೆ ಇದೆ.

ಬರಿಯ ತೊಂಬತ್ತು ಪುಟಗಳಲ್ಲಿ ನಿವೇದಿತಾರ ಜೀವನ, ಜೀವಿತ ಕಾರ್ಯಗಳನ್ನು, ಸ್ವಾತಂತ್ರ್ಯಹೋರಾಟವನ್ನು, ಸ್ವದೇಶೀ ಚಳುವಳಿಯನ್ನು ಆಕೆ ರೂಪಿಸಿದ ರೀತಿಯನ್ನು ವಿವರಿಸುತ್ತಲೆ ಆಕೆಯ ವ್ಯಕ್ತಿತ್ವವನ್ನು ಚಿತ್ರಿಸುವ ಲೇಖಕರ ಪ್ರಯತ್ನ ಸಾರ್ಥಕ, ಅಭಿನಂದನೀಯ. ಅನಂತರದ ಹತ್ತು ಪುಟಗಳಲ್ಲಿ, ನಿವೇದಿತಾ ಜೀವನರೇಖೆಗಳು, ಸಿಡಿಲಿನಂತಹ ಆಕೆಯ ಸೂಕ್ತಿಗಳು ಮತ್ತೊಮ್ಮೆ ಆಕೆಯ ವ್ಯಕ್ತಿತ್ವವನ್ನು ನೆನಪಿಗೆ ತರುತ್ತವೆ.

ಓದುಗರು, ಓದುವ ಅಭ್ಯಾಸ ಕಡಿಮೆ ಆಗುತ್ತಿರುವ ಕಾಲದಲ್ಲಿ ಇಂತಹ ಪುಟ್ಟ ಪುಸ್ತಕಗಳು ಹೆಚ್ಚು ಹೆಚ್ಚಾಗಿ ಹೊರಬರಬೇಕು. ನಿವೇದಿತಾಳ ಗಂಭೀರ ವ್ಯಕ್ತಿತ್ವಕ್ಕೆ ಹೊಂದುವ ಗಂಭೀರ ಭಾಷೆಯಲ್ಲಿದೆ ಈ ಪುಸ್ತಕ. ಸ್ವಾಮಿ ವಿವೇಕಾನಂದರಂತೆಯೆ ಕೆಲವೇ ವರ್ಷಗಳ ಆಯುಸ್ಸಿನಲ್ಲಿ ಅಗಾಧವಾದ ಕಾರ್ಯಗಳನ್ನು ಮಾಡಿದ ನಿವೇದಿತಾಳಿಗೆ **ಅಗ್ನಿಪಥಿಕೆ** ಎಂಬ ಸಾರ್ಥಕ ವಿಶೇಷಣ ನೀಡಿ, ಶೀರ್ಷಿಕೆಯಲ್ಲಿ ಬಳಸಿರುವುದು ಗಮನಾರ್ಹ. ಕೆಲವು ಮುದ್ರಣ ದೋಷಗಳಿವೆ: ಸ್ವಾಮೀಜಿಯವರ ಶಿಷ್ಯೆ ಧೀರಮಾತಾ (ಧೀರಾಮಾತಾ ಅಲ್ಲ) ಹೆಸರು ಹಿಲ್‌ಬುಲ್ ಅಲ್ಲ, ಓಲೆಬುಲ್. ಒಟ್ಟಿನಲ್ಲಿ , ಈ ಕೃತಿ ರಾಮಕೃಷ್ಣ–ವಿವೇಕಾನಂದ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆ.

*— ಡಾ. ಹೆಚ್. ಪಾಂಡುರಂಗ ವಿಠಲ*

## ಶ್ರೀಮಾತೆಯವರ ಉಪದೇಶಗಳು



**ಶಿಷ್ಯ :** ‘‘ಅಮ್ಮಾ, ಕರ್ಮವು ಫಲ ಕೊಡುವುದನ್ನು ತಡೆಯಬಹುದೆ? ಜ್ಞಾನದ ಮೂಲಕ ಮಾತ್ರ ಕರ್ಮವು ಫಲ ಕೊಡುವುದನ್ನು ನಿಲ್ಲಿಸಬಹುದು ಎಂದು ಶಾಸ್ತ್ರಗಳು ಹೇಳುತ್ತವೆ. ಆದರೂ ಪ್ರಾರಬ್ಧ ಕರ್ಮವನ್ನು ಮಾತ್ರ ಅನುಭವಿಸಬೇಕು ಎನ್ನುತ್ತಾರೆ.

**ಶ್ರೀಮಾತೆ :** ಕರ್ಮದಿಂದಲೇ ಎಲ್ಲ ಸುಖ, ದುಃಖಗಳು ಉಂಟಾಗುತ್ತವೆ. ಶ್ರೀರಾಮಕೃಷ್ಣರು ಕೂಡ ಕರ್ಮಫಲವನ್ನು ಅನುಭವಿಸಬೇಕಾಗಿ ಬಂತು.

ಕರ್ಮಫಲವನ್ನು ಅನುಭವಿಸಲೇಬೇಕು. ಆದಕಾರಣ ಭಗವಂತನ ನಾಮಜಪ ಮಾಡಿದರೆ ಕಾಲು ಕತ್ತರಿಸಿ ಹೋಗಬೇಕಾದಲ್ಲಿ ಒಂದು ಸೂಜಿ ಚುಚ್ಚುವುದು ಅಷ್ಟೆ. ಜಪತಪಾದಿಗಳನ್ನು ಮಾಡಿದರೆ ಕರ್ಮ ಬಹುಪಾಲು ಕ್ಷಯವಾಗುವುದು. ರಾಜ ಸುರಥ ದೇವಿಗೆ ಒಂದು ಲಕ್ಷ ಆಡಿನ ಬಲಿ ನೀಡಿ ಆರಾಧನೆ ಮಾಡಿದ್ದರಿಂದಾಗಿ ಆ ಒಂದು ಲಕ್ಷ ಆಡುಗಳು ಸೇರಿಕೊಂಡು ಕೋಪದಿಂದ ಅವನನ್ನು ಒಂದೇ ಏಟಿಗೆ ಕತ್ತರಿಸಿ ಹಾಕಿದವು. ಅದರಿಂದ ಅವನಿಗೆ ಮತ್ತೆ ಒಂದು ಲಕ್ಷ ಬಾರಿ ಜನವೆತ್ತಬೇಕಾಗಿ ಬರಲಿಲ್ಲ. ದೇವಿಯ ಆರಾಧನೆ ಮಾಡಿದ್ದನಲ್ಲವೆ? ಭಗವಂತನ ನಾಮಜಪದಿಂದ ಕರ್ಮಫಲ ಕಡಿಮೆಯಾಗುವುದು.

**ಶಿಷ್ಯ :** ಜಪತಪಾದಿಗಳಿಂದ ಕರ್ಮದ ಪರಿಣಾಮ ಕತ್ತರಿಸಲ್ಪಡುವುದೆ ?

**ಶ್ರೀಮಾತೆ :** ಹಾಗಲ್ಲದೆ ಮತ್ತೇನು? ಒಳ್ಳೆಯ ಕೆಲಸ ಮಾಡಿದರೆ ಒಳ್ಳೆಯದಾಗುವುದು. ಕೆಟ್ಟ ಕೆಲಸ ಮಾಡಿದರೆ ಕಷ್ಟ ಅನುಭವಿಸಬೇಕಾಗುವುದು.

**‘ಶ್ರೀಶಾರದಾದೇವಿ ವಚನವೇದ’** ದಿಂದ, ಪು.೨೦೮–೨೦೯